KAHS610014902022

# **1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.**

**ಉಪಸ್ಥಿತರು : ಶ್ರೀ ಪುರುಷೋತ್ತಮ ಟಿ.ಪಿ. ಬಿ.ಎ., ಎಲ್.ಎಲ್.ಬಿ.**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

## **ಸಿ.ಸಿ. ಸಂಖ್ಯೆ 527/2022**

## **ದಿನಾಂಕ :20 ನೇ ಜೂನ್ 2026**

**ಪಿರ್ಯಾದಿದಾರರು :** ಕರ್ನಾಟಕ ಸರ್ಕಾರ,
ಅಬಕಾರಿ ನಿರೀಕ್ಷಕರು,
ಚನ್ನರಾಯಪಟ್ಟಣ ವಲಯ.
ಚನ್ನರಾಯಪಟ್ಟಣ

**(ಸಹಾಯಕ ಸರ್ಕಾರಿ ಅಭಿಯೋಜಕರಿಂದ)**

**ವಿರುದ್ಧ**

**ಆರೋಪಿ/ಗಳು :** ಸುಧಾ ಬಿನ್ ರಂಗಸ್ವಾಮಿ,
ಸುಮಾರು 40 ವರ್ಷ,
ದಂಡಿಗನಹಳ್ಳಿ ಗ್ರಾಮ ಮತ್ತು ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**(ಶ್ರೀ. ಡಿ.ಎ.ವಿ. ವಕೀಲರಿಂದ)**

| | | |
|---|---|---|
| ಘಟನೆ ಸಂಭವಿಸಿದ ದಿನಾಂಕ | ಃ | 20-11-2021 |
| ಘಟನೆ ವರದಿಯಾದ ದಿನಾಂಕ | ಃ | 20-11-2021 |
| ಫಿರ್ಯಾದಿದಾರರ ಹೆಸರು | ಃ | ರೂಪಾ ವಿ.ಕೆ |

ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ ಃ 24-09-2025
ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕಃ - 12-06-2026
ಆರೋಪಿಸಲಾದ ಅಪರಾಧಗಳು - ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 14, 15, 32(1) ಮತ್ತು 38(ಎ)
ನ್ಯಾಯಾಧೀಶರ ಅಭಿಪ್ರಾಯ - ಕೊನೆಯ ಆದೇಶದಂತೆ.

## :: ತೀರ್ಪು ::

ಅಬಕಾರಿ ಉಪ ನಿರೀಕ್ಷಕರು, ಚನ್ನರಾಯಪಟ್ಟಣ ವಲಯರವರು ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.14, 15, 32(1) ಮತ್ತು 38(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಮಾಡಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷೀಪ್ತ ವಿವರಣೆ :-**

ದಿನಾಂಕ-20.11.2021 ರಂದು 2021 ರ ವಿಧಾನ ಪರಿಷತ್ ಚುನಾವಣಾ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ್ದು, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಮಧ್ಯಾಹ್ನ ಸುಮಾರು 1.00 ಗಂಟೆ ಸಮಯದಲ್ಲಿ ಗಸ್ತು ನಡೆಸುತ್ತಿದ್ದು, ದಂಡಿಗನಹಳ್ಳಿ ಗ್ರಾಮದ ಆರೋಪಿತಳ ವಾಸದ ಮನೆಯ ಮೇಲೆ ಅಬಕಾರಿ ದಾಳಿ ನಡೆಸಿದಾಗ, ಆರೋಪಿತಳು ವಾಸದ ಮನೆಯಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಧ್ಯ ಮಾರಾಟ ಮಾಡುವ ಉದ್ದೇಶದಿಂದ ಒಟ್ಟು 5,550/- ಲೀಟರ್ ಮಧ್ಯವನ್ನು ಸ್ವಾಧೀನ ಹೊದಿದ್ದರಿದ, ಸದರಿ ಆರೋಪಿತಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಪಿರ್ಯಾದುದಾರರು ಕೋರಿದ್ದು, ಸದರಿ ದೂರನ್ನು ಆಧರಿಸಿ ಆರೋಪಿತಳ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ, ನಂತರ ತನಿಖೆಯನ್ನು

ಪೂರ್ಣಗೊಳಿಸಿ ಆರೋಪಿತಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

**3.** ಆರೋಪಿಯು ನ್ಯಾಯಾಲಯದಲ್ಲಿ ಜಾಮೀನು ಪಡೆದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂಃ 207ರ ಪ್ರಕಾರ ಅಭಿಯೋಜನೆಯ ಪ್ರಕರಣದ ಪ್ರತಿಗಳನ್ನು ಆರೋಪಿಗೆ ಪೂರೈಸಲಾಯಿತು. ವಾದವನ್ನು ಕೇಳಿದ ನಂತರ ಆರೋಪಿಯನ್ನು ಈ ಪ್ರಕರಣದಿಂದ ಕೈ ಬಿಡಲು ಯಾವುದೇ ಸಕಾರಣಗಳು ಇಲ್ಲದಿದ್ದರಿಂದ ಆರೋಪಿ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿ ಓದಿ ಹೇಳಿದ್ದು, ಆರೋಪಿಯು ದೋಷಾರೋಪಣೆಯನ್ನು ಅಲ್ಲಗಳೆದು ತಪ್ಪು ಮಾಡಿಲ್ಲ, ಪ್ರಕರಣ ವಿಚಾರಣೆ ಆಗಬೇಕೆಂದು ಕೇಳಿರುತ್ತಾರೆ.

**4.** ಆರೋಪಿ ಮೇಲೆ ಹೊರಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯ ಪರ ಸಾಕ್ಷಿದಾರರಿಗೆ ತಮ್ಮ ಸಾಕ್ಷ್ಯ ನೀಡಲು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ನೀಡಲಾಯಿತು. ಅಭಿಯೋಜನೆಯು ಚಾಸಾ. 2, 3, 1, 7, 5, ಮತ್ತು 6 ರವರನ್ನು ಪ್ರಾಸಾ.1 ರಿಂದ ಪ್ರಾಸಾ.6 ಎಂದು ವಿಚಾರಣೆಗೊಳಪಡಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ದಾಖಲೆಗಳನ್ನು ನಿಪಿ.1 ರಿಂದ ನಿಪಿ.11 ಎಂದು ಹಾಗೂ ಮುದ್ದೆ ಮಾಲನ್ನು ಎಂ.ಒ.ನಂ.1 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ: 313ರ ಅಡಿಯಲ್ಲಿ ಆರೋಪಿ ಹೇಳಿಕೆಗಳನ್ನು ಪಡೆಯಲಾಯಿತು. ಆರೋಪಿಯು ತಮ್ಮ ಪರ ಸಾಕ್ಷ್ಯ ವಿಚಾರಣೆಗೆ ಮುಂದಾಗಿರುವುದಿಲ್ಲ.

**5.** ಅಭಿಯೋಜನೆಯ ಪರ ಹಾಗೂ ಆರೋಪಿ ಪರ ವಕೀಲರ ವಾದಗಳನ್ನು ಕೇಳಲಾಯಿತು.

**6.** ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**ಅಂಶ-1**ಃ ದಿನಾಂಕಃ20.11.2021 ರಂದು 2021 ರ

ವಿಧಾನ ಪರಿಷತ್ ಚುನಾವಣಾ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ್ದು, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಮಧ್ಯಾಹ್ನ ಸುಮಾರು 1.00 ಗಂಟೆ ಸಮಯದಲ್ಲಿ ಗಸ್ತು ನಡೆಸುತ್ತಿದ್ದು, ದಂಡಿಗನಹಳ್ಳಿ ಗ್ರಾಮದ ಆರೋಪಿತಳ ವಾಸದ ಮನೆಯ ಮೇಲೆ ಅಬಕಾರಿ ದಾಳಿ ನಡೆಸಿದಾಗ, ಆರೋಪಿತಳು ವಾಸದ ಮನೆಯಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಧ್ಯ ಮಾರಾಟ ಮಾಡುವ ಉದ್ದೇಶದಿಂದ ಒಟ್ಟು 5,550/- ಲೀಟರ್ ಮಧ್ಯವನ್ನು ಇಟ್ಟುಕೊಂಡಿದ್ದು, ಆ ಮೂಲಕ ಆರೋಪಿಯು **ಕರ್ನಾಟಕ ಅಬಕಾರಿ ಕಾಯ್ದೆ** 1965ರ **ಕಲಂ 14, 15, ನಿಯಮಗಳನ್ನು ಉಲ್ಲಂಘಿಸಿ, ಕಲಂ.32(1)** ರಡಿಯಲ್ಲಿ ದಂಡಿಸಬಹುದಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವುದೇ ?

**ಅಂಶ -2**ಃ ಅದೇ ದಿನ , ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಯಾವುದೇ ಪರವಾನಿಗೆ ಇಲ್ಲದೇ ಮದ್ಯವನ್ನು ಇಟ್ಟುಕೊಳ್ಳಬಾರದು ಎಂದು ತಿಳಿದಿದ್ದರೂ ಸ್ವದೇಶಿ ಮದ್ಯವನ್ನು ಇಟ್ಟುಕೊಂಡಿದ್ದು, ಆ ಮೂಲಕ ಆರೋಪಿಯು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 38(ಎ) ಮತ್ತು 43** ರಡಿಯಲ್ಲಿ ದಂಡಿಸಬಹುದಾದ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವುದೇ ?

**ಅಂಶ-3**ಃ ಯಾವ ಆದೇಶ ?

**7.** ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ :1 ಮತ್ತು 2 : **ನಕಾರಾತ್ಮಕವಾಗಿ**
ಅಂಶಃ 3 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

## ೦ಃ ಕಾರಣಗಳು ೦ಃ

**8. ಅಂಶ ಸಂಖ್ಯೆ 1 ಮತ್ತು 2:-** ಸದರಿ ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**9.** ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ನಿರ್ಧಿಷ್ಟ ಆರೋಪವೇನೆಂದರೆ, ದಿನಾಂಕ-20.11.2021 ರಂದು 2021 ರ ವಿಧಾನ ಪರಿಷತ್ ಚುನಾವಣಾ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ್ದು, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಮಧ್ಯಾಹ್ನ ಸುಮಾರು 1.00 ಗಂಟೆ ಸಮಯದಲ್ಲಿ ಗಸ್ತು ನಡೆಸುತ್ತಿದ್ದು, ದಂಡಿಗನಹಳ್ಳಿ ಗ್ರಾಮದ ಆರೋಪಿತಳ ವಾಸದ ಮನೆಯ ಮೇಲೆ ಅಬಕಾರಿ ದಾಳಿ ನಡೆಸಿದಾಗ, ಆರೋಪಿತಳು ವಾಸದ ಮನೆಯಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಧ್ಯ ಮಾರಾಟ ಮಾಡುವ ಉದ್ದೇಶದಿಂದ ಒಟ್ಟು 5,550/- ಲೀಟರ್ ಮಧ್ಯವನ್ನು ಸ್ವಾಧೀನ ಹೊಂದಿದ್ದರು ಎಂಬುದಾಗಿ ಇರುತ್ತದೆ.

**10**. ಸದರಿ ಆರೋಪವನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಾಸಾ.1 ರಿಂದ 6 ರವರ ಸಾಕ್ಷ್ಯವನ್ನು ಅವಲಂಬಿಸಿರುತ್ತದೆ. ಪ್ರಾಸಾ.1/ಚಾಸಾ.2 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ ನೋಡುತ್ತಿರುವ ಸಹಿಯು ನನ್ನದಾಗಿರುತ್ತದೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುಸಿತಿದ್ದು ಅದನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ, ಎಲ್ಲಿ ಮಾಡಿದ್ದೆನೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿರುವ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ-1 ಕ್ಕೆ

ಬೇರೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**11.** ಪ್ರಾಸಾ.1 ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು, ಸದರಿಯವರು ಯಾವುದೇ ಪೂರಕವಾದ ಅಂಶಗಳನ್ನು ಹೊರತಂದಿರುವುದಿಲ್ಲ.

**12**. ಪ್ರಾಸಾ.2/ಚಾಸಾ.3 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಈಗ ನೋಡುತ್ತಿರುವ ಸಹಿಯು ನನ್ನದಾಗಿರುತ್ತದೆ. ಸಾಕ್ಷಿಯು ನಿಪಿ-1 ರಲ್ಲಿ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ, ಎಲ್ಲಿ ಮಾಡಿದ್ದೆನೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿರುವ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ-1 ಕ್ಕೆ ಬೇರೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಪ್ರಾಸಾ-2 ರವರನ್ನು ರವರನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು, ಸದರಿಯವರು ಯಾವುದೇ ಪೂರಕವಾದ ಅಂಶಗಳನ್ನು ಹೊರತಂದಿರುವುದಿಲ್ಲ

**14**. ಪ್ರಾಸಾ.3/ಚಾಸಾ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ **20.11.2021** ರಂದು ದಂಡಿಗನಹಳ್ಳಿಯ ಬಳಿ ಹೋಗಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗಳ ಬಳಿ ಹೋಗಿ ನಮ್ಮ ಪರಿಚಯ ಹೇಳಿಕೊಂಡು ಅವರ ಪರಿಚಯವನ್ನು ಕೇಳಿ ನಾವು ಬಂದ ಕಾರಣ ತಿಳಿಸಿದೇವು. ದಂಡಿಗನಹಳ್ಳಿ ಗ್ರಾಮದಲ್ಲಿ ಇರುವ ಆರೋಪಿಯು ತಮ್ಮ ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾರೆ

ಎಂಬ ಮಾಹಿತಿ ಬಂದಿರುತ್ತದೆ. ಮಾಹಿತಿಯ ಸಂಬಂಧ ನಾವು ಇಲ್ಲಿಗೆ ಬಂದಿರುವುದಾಗಿ ಆ ಮೂರು ಜನರಿಗೆ ತಿಳಿಸಿ. ಸದರಿ ವ್ಯಕ್ತಿಯ ಮನೆಯನ್ನು ಶೋಧಿಸುವಾಗ ತಾವುಗಳು ಪಂಚರಾಗಿ ಬಂದು ಹಾಜರು ಇದ್ದು ಸಹಕರಿಸಬೇಕು ಎಂದು ಕೇಳಿಕೊಂಡಾಗ, ಅವರುಗಳು ಒಪ್ಪಿ ಇಲಾಖ ವಾಹನದಲ್ಲಿ ನಮ್ಮ ಜೊತೆ ಬಂದಿರುತ್ತಾರೆ. ಅವರಿಗೆ ಪಂಚರ ನೋಟಿಸ್ಸ್ ನ್ನು ನೀಡಿ ಸಹಿ ಪಡೆದುಕೊಳ್ಳಲಾಯಿತು. ನಂತರ ನ್ಯಾಯಾಲಯದಿಂದ ಶೋಧನ ವಾರೆಂಟ್ ಅನ್ನು ಪಡೆದುಕೊಳ್ಳಲು ಸಮಯವಾಕಾಶ ಇಲ್ಲದ ಕಾರಣ ಹಾಗೂ ತಡಯಾದರೆ ಆರೋಪಿಯು ಸಾಕ್ಷ್ಯವನ್ನು ನಾಶಮಾಡಬಹುದು ಎಂಬ ಕಾರಣಕ್ಕೆ ಕರ್ನಾಟಕ ಅಭಕಾರಿ ಕಾಯ್ದೆ **1965** ಅಡಿಯಲ್ಲಿ ಅಧಿಕಾರವಿದ್ದ ಕಾರಣ ಶೋಧನ ಸಮುಚಿತ ವಾರೆಂಟ್ ನ್ನು ಸ್ಥಳದಲ್ಲಿ ತಯಾರಿಸಿಕೊಂಡು ಪಂಚರ ಸಹಿ ಪಡೆದುಕೊಳ್ಳಲಾಯಿತು. ನಂತರ ಮಾಹಿತಿ ಇದ್ದ ಮನೆಯನ್ನು ತೋರಿಸಿರುತ್ತಾರೆ. ನಂತರ ಮನೆಯ ಬಳಿ ಮಹಿಳೆ ಒಬ್ಬರೂ ನಿಂತಿರುವುದು ಕಂಡುಬಂದಿದ್ದು ನಮ್ಮನ್ನು ನೋಡಿ ಗಾಬರಿಗೂಂಡು ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿದ್ದು ಅವರು ಸಿಕ್ಕಿರುವುದಿಲ್ಲ. ಪಂಚರು ಮಾಹಿತಿ ಇರುವ ವ್ಯಕ್ತಿಯೇ ಓಡಿ ಹೋಗಿದ್ದು ಎಂದು ನಮಗೆ ತಿಳಿಸಿರುತ್ತಾರೆ. ನಂತರ ಸಿಬ್ಬಂದಿ ಪಂಚರ ಸಹಾಯದಿಂದ ಅಂಗ ಶೋಧನೆ ಮಾಡಿಕೊಂಡು, ಶೋಧಿಸಿದಾಗ ಮನೆಯಕೊಠಡಿಯ ಒಂದು ಮೂಲೆಯಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಪತ್ತೆಯಾಗಿದ್ದು ಅದನ್ನು ಮನೆಯ ಮುಂಭಾಗ ತಂದು ಸುರಿದು ನೋಡಿದಾಗ ಅದರಲ್ಲಿ ಭದ್ರುತ ಚೀಟಿ ಸಂಖ್ಯೆ ಇಲ್ಲದ ಒರಿಜಿನಲ್ ಹೆಸರಿನ **90**ಮಿ **58** ಟೆಟ್ರಾ ಪ್ಯಾಕ್ ಗಳು ಕಂಡುಬಂದಿರುತ್ತದೆ. ಸದರಿ ಮಧ್ಯವನ್ನು ಹೊಂದಲು ಪರವಾನಿಗೆ ಹಾಗೂ ರಹದಾರಿ ಇದೆಯೇ ಎಂದು ಪರೀಲನೆ ಮಾಡಿದ್ದು ಕಂಡುಬಂದಿರುವುದಿಲ್ಲ. ಕಾನೂನಿನ ಅರಿವಿಲ್ಲದೇ ಮಧ್ಯವನ್ನು ಮಾರಾಟ ಮಾಡಿ ಹಣಗಳಿಸುವ ಉದ್ದೇಶದಿಂದ ಮಧ್ಯದ ದಾಸ್ತಾನು ಹೊಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಈ ರೀತಿಯಾಗಿ ಅಕ್ರಮವಾಗಿ ಮಧ್ಯವನ್ನು ಹೊಂದಿ

ಮಾರಾಟ ಮಾಡುವುದು ಕರ್ನಾಟಕ ಅಭಕಾರಿ ಕಾಯ್ದೆ ಕಲಂಗಳ ರೀತ್ಯ ಶಿಕ್ಷರ್ಹ ಅಪರಾಧ ಎಂದು ತಿಳಿಸಿ ಸದರಿ ಮಧ್ಯವನ್ನು ಸ್ಥಳ ಮಹಜರ್ ಕ್ರಮ ಜರುಗಿಸುವ ಮೂಲಕ ಇಲಾಖ ವಶಕ್ಕೆ ಪಡೆದು ದೊರೆತ ಮಧ್ಯದ ಪೈಕಿ ಒರಿಜಿನಲ್ ಚಾಯ್ಸ್ ವಿಸ್ಕಿಯ **30** ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರಿಕ್ಷೇಗೆಂದು ಸ್ಥಳದಲ್ಲೇ ಮಾದರಿಯನ್ನು ತೆಗೆದು ಇಲಾಖ ವಾಹನದಲ್ಲಿ ಇದ್ದ ಬಿಳಿ ಬಟ್ಟೆ ಸೂಜಿ ದಾರ ತಂದು ಇತರೆ ಸಾಮಾಗ್ರಿಗಳನ್ನು ತಂದು ಬಳಿ ಬಟ್ಟೆಯಿಂದ ಒಂದು ಬ್ಯಾಗ್ ಅನ್ನು ತಯಾರಿಸಿಕೊಂಡು ಮಾದರಿ ತೆಗೆದ **30** ಟೆಟ್ರಾ ಪ್ಯಾಕ್ ಗಳನ್ನು ಆ ಬ್ಯಾಗ್ ನಲ್ಲಿ ತುಂಬಿ ದಾರದಿಂದ ಹೊಲೆದು ಕಟ್ಟಿ, ಇಲಾಖ ಸೀಲ್ ನಂ **337** ರಿಂದ ಸೀಲ್ ಮಾಡಲಾಯಿತು. ಮಾದರಿ ಸೀಲ್ ನ ನಕಲನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಳ್ಳಲಾಯಿತು. ಮಾದರಿ ಚೀಟಿಯನ್ನು ಮಾದರಿ ಚೀಲಕ್ಕೆ ಅಂಟಿಸಲಾಯಿತು. ನಂತರ ಮಾದರಿ ತೆಗೆದು ಉಳಿದ ಟೆಟ್ರಾ ಪ್ಯಾಕ್‌ಗಳನ್ನು ಮುಂದಿನ ತಖೆಗಾಗಿ ವಶಪಡಿಸಿಕೂಳ್ಳಲಾಯಿತು. ನಂತರ ಉಳಿದ ಟೆಟ್ರಾ ಪ್ಯಾಕ್ ಗಳನ್ನು ಮೇಲಾಧಿಕಾರಿಗಳ ಆದೇಶದಂತೆ ನಾಶ ಪಡಿಸುವುದಾಗಿ ಪಂಚರಿಗೆ ತಿಳಿಸಿ, ದೊರೆತ ಪ್ಲಾಸ್ಟಿಕ್ ಚೀಲಕ್ಕೆ ತುಂಬಿ ಕಛೇರಿಗೆ ತರಲಾಯಿತು. ಸದರಿ ಸ್ಥಳ ಮಹಜರ್ ಕ್ರಮವನ್ನು ಮ **1.20** ರಿಂದ **2.30** ವರಿಗೂ ಬರೆಯಲಾಯಿತು. ಸದರಿ ಮಹಜರ್ ಕ್ರಮವನ್ನು ಪಂಚರಾದ ಚಾಸಾ-**2**ಮತ್ತು **3** ಹಾಗೂ ನಮ್ಮ ಸಿಬ್ಬಂದಿ ಹಾಗೂ ಆರೋಪಿಯ ಸಮಕ್ಷಮ ಮಾಡಲಾಯಿತು. ನಂತರ ವಶಪಡಿಸಿಕೊಂಡ ಮು.ಮಾ ಅನ್ನು ಕಛೇರಿಗೆ ತಂದು, ಮೊಕದಮ್ಮೆ ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ದಿಃ **22.11.2021** ರಂದು ಚಾಸಾ-**2** ರಿಂದ **5** ರವರ ಹೇಳಿಕೆಯನ್ನು ಪಡೆಯಲಾಯಿತು. ದಿಃ**03.12.2021** ರಂದು ಚಾಸಾ-**5** ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದು ನಂತರ ದಿಃ **03.12.2021** ರಂದು ಸದರಿ ಪ್ರಕರಣದ ಕಡತ ಹಾಗೂ ಮುಮಾಗಳನ್ನು ಚಾಸಾ-**7** ರವರಿಗೆ

ವರ್ಗಾಯಿಸಲಾಗಿರುತ್ತದೆ. ಆರೋಪಿಯು ಗೈರು ಹಾಜರು ಆಗಿದ್ದು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ, ಒಟ್ಟಾರೆ **30** ಟೆಟ್ರಾ ಪ್ಯಾಕ್‌ಗಳನ್ನು ನೋಡಿ ಗುರುತಿಸಿದರು. ಅದನ್ನು ಒಟ್ಟಾರೆಯಾಗಿ ಮು.ಮಾ.**1** ಎಂದು ಗುರುತಿಸಲಾಯಿತು. ಹಾಗೂ ಸಾಕ್ಷಿಯ ಸಹಿಯನ್ನು ಮುಮಾ-**1**(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು ನಿಪಿ.**1** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.**1**(ಸಿ) ಎಂದು ಗುರುತಿಸಲಾಯಿತು. ಶೋಧನ ವಾರೆಂಟ್ ನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ.**4**ಎಂದು ಹಾಗೂ ನಿಪಿ.**4**(ಎ) ಎಂದು ಗುರುತಿಸಲಾಯಿತು. **List of Articles** ನ್ನು ಗುರುತಿಸಿದ್ದು ಅದನ್ನು ನಿಪಿ.**5**ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.**5**(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.**6**ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.**6**(ಎ) ಎಂದು ಗುರುತಿಸಲಾಯಿತು. ಮಾದರಿ ನಕಲನ್ನು ಗುರುತಿಸಿದ ಕಾರಣ ಅದನ್ನು ನಿಪಿ.**7**ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**7**(ಎ) ಎಂದು ಗುರುತಿಸಲಾಯಿತು. ನಿವೇದನೆಯನ್ನು ನು ಗುರುತಿಸಿದ ಕಾರಣ ಅದನ್ನು ನಿಪಿ.**8**ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.**8**(ಎ) ಎಂದು ಹಾಗೂ ಚಾಸಾ.**5** ರವರ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ.**8**(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಪ್ರಾಸಾ.**3** ರವರನ್ನು ಆರೋಪಿತ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದ್ದು, ಸದರಿಯವರು ಮಾಹಿತಿ ಬಂದಾಗ ಮಧ್ಯಾಹ್ನ **12.15** ಆಗಿರುತ್ತದೆ. **12.20** ಕ್ಕೆ ತಮ್ಮ ಇಲಾಖೆಯಿಂದ ಹೊರಟಿರುತ್ತೇವೆ. ಮಾಹಿತಿ ಬಂದ ನಂತರ ನೇರವಾಗಿ ದಂಡಿಗನಹಳ್ಳಿ ಗೇಟ್ ಗೆ ಹೋಗಿರುತ್ತೇವೆ. ದಂಡಿಗನಹಳ್ಳಿ ಚನ್ನರಾಯಪಟ್ಟಣದಿಂದ ಸುಮಾರು **15** ಕಿಮಿ ಆಗುತ್ತದೆ.

ದಂಡಿಗನಹಳ್ಳಿ ಗೇಟ್ ನಿಂದ ಗ್ರಾಮಕ್ಕೆ **1.50** ಕಿಮಿ ಆಗುತ್ತದೆ. ತಮ್ಮ ಠಾಣೆಯಲ್ಲಿ ದಿನಚರಿ ಇರುತ್ತದೆ ಎಂದರೆ ಸರಿ. ಸದರಿ ದಿನಚರಿಯಲ್ಲಿ ನಾವು ಎಲ್ಲಿಗೆ ಹೋಗುತ್ತೇವೆ ಹಾಗೂ ಸಮಯದ ಬಗ್ಗೆ ನಮೂದು ಮಾಡಬೇಕು ಎಂದರೆ ಸರಿ. ಸದರಿ ಬಗ್ಗೆ ನಮೂದು ಮಾಡಿರುತ್ತೇವೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಘಟನ ಸ್ಥಳ ಟಾರು ರಸ್ತೆಗೆ ಆರೋಪಿಯ ಮನೆ ಹೊಂದುಕೊಂಡಿದ್ದೆ ಎಂದರೆ ಸಾಕ್ಷಿಯು ರಸ್ತೆಯಿಂದ **30**ಮಿ ದೂರದಲ್ಲಿ ಇದೆ ಎಂದು ನುಡಿದಿರುತ್ತಾರೆ. ಆ ದಿನ ನಾವು **4** ಜನ ಹೋಗಿದ್ದೇವು. ನಮ್ಮ ಜೀಪ್ ನ್ನು ಆರೋಪಿಯು ನೋಡಿರುತ್ತಾರೆ. ಆ ದಿನ ಆರೋಪಿಯು ಯಾವ ಬಣ್ಣದ ಬಟ್ಟೆಯನ್ನು ಹಾಕಿದ್ದರು ಎಂದು ಗೊತ್ತಿಲ್ಲ. ನಾವು ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದ್ದು ಅವರು ಸಿಕ್ಕಿರುವುದಿಲ್ಲ. ನಾವು ಹಿಡಿಯಲು ಸುಮಾರು **50**ಮಿ ರಷ್ಟು ಹೋಗಿರುತ್ತೇವೆ. ಆರೋಪಿಯ ಮನೆಯ ಪಕ್ಕ ವಾಸದ ಮನೆಗಳು ಇದೆ. ಸದರಿಯವರನ್ನು ಸಾಕ್ಷಿದಾರನ್ನಾಗಿ ಮಾಡಲು ಪ್ರಯತ್ನಿಸಿದ್ದು ಸ್ಥಳಿಯರು ಅದಕ್ಕೆ ಒಪ್ಪಿರುವುದಿಲ್ಲ. ನಾವು ದಂಡಿಗನಹಳ್ಳಿ ಗ್ರಾಮಕ್ಕೆ ದಿಃ **20.11.2021** ರಂದು ಹೊರತು ಪಡಿಸಿ ಬೇರೆ ದಿನ ಹೋಗಿಲ್ಲ ಎಂದರೆ ಸಾಕ್ಷಿಯು ಅನೇಕ ಬಾರಿ ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ಶೋಧನ ವಾರೆಂಟ್ ನ್ನು ದಿಃ **20.11.2021** ರಂದು ತಯಾರಿಸಿಕೊಂಡಿರುತ್ತೇವೆ. ಅದಕ್ಕೆ ಪಂಚರ ಸಹಿಯನ್ನು ಪಡೆದಿರುತ್ತೇವೆ. ಪಂಚರು ತೆಂಕನಹಳ್ಳಿ ಹಾಗೂ ದಂಡಿಗನಹಳ್ಳಿಯವರು. ಪಂಚರ ಆಧಾರ್ ಕಾರ್ಡ್ ನ್ನು ಪಡೆದುಕೊಂಡಿರುತ್ತೇವೆ ಹಾಗೂ ನ್ಯಾಯಾಲಯಕ್ಕೆ ಹಾಜರು ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ-**3** ರವರು ತೆಂಕನಹಳ್ಳಿಯವರು. ಚಾಸಾ-**3** ರವರ ಆಧಾರ್ ಕಾರ್ಡ್ ನಲ್ಲಿ ತೆಂಕನಹಳ್ಳಿ ಎಂದು ನಮೂದು ಆಗಿರುತ್ತದೆ. ದಿಃ **20.11.2021** ರಂದು ಹೊರತು ಪಡಿಸಿ ಚಾಸಾ-**2, 3** ರವರ ಸಹಿಗಳನ್ನು ಬೇರೆ ದಿನ ಪಡೆದುಕೊಂಡಿರುವುದಿಲ್ಲ ಎಂದರೆ

ಸರಿ. ಶೋಧನ ಸಮುಚಿತ್ತ ಆಧಾರ ನಿಪಿ-4 ರಲ್ಲಿ ದಿಃ **19.11.2021** ಎಂದು ನಮೂದು ಆಗಿದೆ ಎಂದರೆ ಸರಿ. ನಿಪಿ-4 ಕ್ಕೆ ಚಾಸಾ-2, 3 ರವರ ಸಹಿ ಪಡೆದಿದ್ದೇವೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋಗುವ ಮೊದಲು ನಿಪಿ-4 ನ್ನು ಠಾಣೆಯಲ್ಲಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ದಿನಾಂಕ ತಪ್ಪಾಗಿ ನಮೂದು ಆಗಿದೆ ಎಂದು ನುಡಿದಿರುತ್ತಾರೆ. ಸದರಿ ಮನೆ ಆರೋಪಿಯ ಹೆಸರಿನಲ್ಲಿ ಇರಬಹುದು ಇದಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ಚಾಸಾ-7 ರವರು ಪಡೆದುಕೊಂಡಿರಬಹುದು. ಮು.ಮಾ-1 ಇದ್ದ ಪ್ಲಾಸ್ಟಿಕ್ ಚೀಲ ಈಗ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಸದರಿ ಚೀಲವನ್ನು ಮೇಲಾಧಿಕಾರಿಗಳ ಆದೇಶದಂತೆ ನಾಶ ಮಾಡಿರುತ್ತೇವೆ. ಎಲ್ಲಾ ಮಧ್ಯವನ್ನು ನಾವು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವುದಿಲ್ಲ ಹಾಗೂ ಕಳುಹಿಸಿಕೊಡಲು ತೊಂದರೆ ಇರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**16.** ಪ್ರಾಸಾ.4/ ಚಾಸಾ.7 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ದಿಃ **03.12.2021** ರಂದು ಮುಂದಿನ ಕಡತವನ್ನು ಚಾಸಾ-1ರವರಿಂದ ಪಡೆದುಕೊಂಡು ದಿಃ **04.12.2021** ರಂದು ಗ್ರಾಮ ಲೆಕ್ಕಾಧಿಕಾರಿರವರಿಗೆ ಸ್ಥಳದ ಮಲೀಕತ್ವದ ವಿವರ ಕೋರಿ ಮನವಿಯನ್ನು ಸಲ್ಲಿಸಿರುತ್ತೇನೆ. ದಿಃ **23.01.2022** ರಂದು ಸದರಿ ಪ್ರಕರಣದಲ್ಲಿ ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದಿರುತ್ತೇನೆ. ದಿಃ **08.02.2022** ರಂದು ವಿಎ ರವರು ಮಾಲೀಕತ್ವದ ವಿವರವನ್ನು ನೀಡಿದ್ದು ಅದರಲ್ಲಿ ಮಾಲೀಕರು ಕೃಷ್ಣೇಗೌಡ ಆಗಿದ್ದು ಸ.ನಂ **11/4** ಆಗಿರುತ್ತದೆ. ನಂತರ ಸದರಿಯವರು ಮರಣ ಹೊಂದಿರುವುದಾಗಿ ನುಡಿದಿರುತ್ತಾರೆ. ನಂತರ ಅಂತಿಮ ಪಟ್ಟಿಯಿಂದ ಕೈ ಬಿಟ್ಟು ಆರೋಪಿಯ ವಿರುದ್ಧ ಆರೋಪ ಸಭೀತು ಆದ ಕಾರಣ ಅಂತಿಮ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ

ಮು.ಮಾ.**1** ನ್ನು ನೋಡಿ ಗುರುತಿಸಿದ್ದು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ಮನವಿಯನ್ನು ನೋಡಿ ಗುರುಸಿತಿದ್ದು ಅದನ್ನು ನಿಪಿ.**9** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.**9**(ಎ) ಎಂದು, ವರದಿಯನ್ನು ನಿಪಿ.**10** ಎಂದು, ರಾಸಾಯನಿಕ ವರದಿಯನ್ನು ನಿಪಿ.**11** ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**17.** ಆರೋಪಿ ಪರ ವಕೀಲರು ಪ್ರಾಸಾ.**4** ರವರನ್ನು ಪಾಟೀ ಸವಾಲಿಗೊಳಪಡಿಸಿದ್ದು ಚಾಸಾ-1 ರವರು ಭಾಗಶಃ ತನಿಖೆಯನ್ನು ಪೂರ್ಣಗೊಳಿಸಿ ಕಡತವನ್ನು ತನಗೆ ನೀಡಿರುತ್ತಾರೆ. ರಾಸಾಯನಿಕ ವರದಿಗೆ 58 ರಲ್ಲಿ 30 ಟೆಟ್ರಾ ಪ್ಯಾಕೇಟ್ ಗಳನ್ನು ಕಳುಹಿಸಿಕೊಡಲಾಯಿತು. ಎಲ್ಲಾ ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ವರದಿಗೆ ಕಳುಹಿಸಿರುವುದಿಲ್ಲ. ಮನೆಗೆ ಸಂಬಂಧಿಸಿ ದಾಖಲಾತಿಗಳನ್ನು ವಿ.ಎ ರವರು ನನಗೆ ನೀಡಿದ ಕಾರಣ ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ದಾಖಲಾತಿಗಳನ್ನು ಪಡೆಯಲು ನನಗೆ ತೊಂದರೆ ಇರಲಿಲ್ಲ. ದಾಳಿ ಮಾಡಿದ ಸಮಯದಲ್ಲಿ ತೆಗೆದ ಪೋಟೋಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಚಾಸಾ-1ರವರಿಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ.

**18.** ಪ್ರಾಸಾ.**5/** ಚಾಸಾ.**5** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ **20.11.2021** ರಂದು ದಂಡಿಗನಹಳ್ಳಿಯ ಬಳಿ ಹೋಗಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗಳ ಬಳಿ ಹೋಗಿ ನಮ್ಮ ಪರಿಚಯ ಹೇಳಿಕೊಂಡು ಅವರ ಪರಿಚಯವನ್ನು ಕೇಳಿ ನಾವು ಬಂದ ಕಾರಣ ತಿಳಿಸಿದೆವು. ದಂಡಿಗನಹಳ್ಳಿ ಗ್ರಾಮದಲ್ಲಿ ಇರುವ ಆರೋಪಿಯು ತಮ್ಮ ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿರುತ್ತದೆ. ಮಾಹಿತಿಯ ಸಂಬಂಧ ನಾವು ಇಲ್ಲಿಗೆ

ಬಂದಿರುವುದಾಗಿ ಆ ಮೂರು ಜನರಿಗೆ ತಿಳಿಸಿ. ಸದರಿ ವ್ಯಕ್ತಿಯ ಮನೆಯನ್ನು ಶೋಧಿಸುವಾಗ ತಾವುಗಳು ಪಂಚರಾಗಿ ಬಂದು ಹಾಜರು ಇದ್ದು ಸಹಕರಿಸಬೇಕು ಎಂದು ಕೇಳಿಕೊಂಡಾಗ, ಅವರುಗಳು ಒಪ್ಪಿ ಇಲಾಖ ವಾಹನದಲ್ಲಿ ನಮ್ಮ ಜೊತೆ ಬಂದಿರುತ್ತಾರೆ. ಅವರಿಗೆ ಪಂಚರ ನೋಟಿಸ್ಸ್ ನ್ನು ನೀಡಿ ಸಹಿ ಪಡೆದುಕೊಳ್ಳಲಾಯಿತು. ನಂತರ ನ್ಯಾಯಾಲಯದಿಂದ ಶೋಧನ ವಾರೆಂಟ್ ಅನ್ನು ಪಡೆದುಕೊಳ್ಳಲು ಸಮಯವಾಕಾಶ ಇಲ್ಲದ ಕಾರಣ ಹಾಗೂ ತಡಯಾದರೆ ಆರೋಪಿಯು ಸಾಕ್ಷ್ಯವನ್ನು ನಾಶಮಾಡಬಹುದು ಎಂಬ ಕಾರಣಕ್ಕೆ ಕರ್ನಾಟಕ ಅಭಕಾರಿ ಕಾಯ್ದೆ **1965** ಅಡಿಯಲ್ಲಿ ಅಧಿಕಾರವಿದ್ದ ಕಾರಣ ಶೋಧನ ಸಮುಚಿತ ವಾರೆಂಟ್ ನ್ನು ಸ್ಥಳದಲ್ಲಿ ತಯಾರಿಸಿಕೊಂಡು ಪಂಚರ ಸಹಿ ಪಡೆದುಕೊಳ್ಳಲಾಯಿತು. ನಂತರ ಮಾಹಿತಿ ಇದ್ದ ಮನೆಯನ್ನು ತೋರಿಸಿರುತ್ತಾರೆ. ನಂತರ ಮನೆಯ ಬಳಿ ಮಹಿಳೆ ಒಬ್ಬರೂ ನಿಂತಿರುವುದು ಕಂಡುಬಂದಿದ್ದು ನಮ್ಮನ್ನು ನೋಡಿ ಗಾಬರಿಗೂಂಡು ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿದ್ದು ಅವರು ಸಿಕ್ಕಿರುವುದಿಲ್ಲ. ಪಂಚರು ಮಾಹಿತಿ ಇರುವ ವ್ಯಕ್ತಿಯೇ ಓಡಿ ಹೋಗಿದ್ದು ಎಂದು ನಮಗೆ ತಿಳಿಸಿರುತ್ತಾರೆ. ನಂತರ ಸಿಬ್ಬಂದಿ ಪಂಚರ ಸಹಾಯದಿಂದ ಅಂಗ ಶೋಧನೆ ಮಾಡಿಕೊಂಡು, ಶೋಧಿಸಿದಾಗ ಮನೆಯಕೊಠಡಿಯ ಒಂದು ಮೂಲೆಯಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಪತ್ತೆಯಾಗಿದ್ದು ಅದನ್ನು ಮನೆಯ ಮುಂಭಾಗ ತಂದು ಸುರಿದು ನೋಡಿದಾಗ ಅದರಲ್ಲಿ ಭದ್ರತ ಚೀಟಿ ಸಂಖ್ಯೆ ಇಲ್ಲದ ಒರಿಜಿನಲ್ ಹೆಸರಿನ **90**ಮಿ **58** ಟೆಟ್ರಾ ಪ್ಯಾಕ್ ಗಳು ಕಂಡುಬಂದಿರುತ್ತದೆ. ಸದರಿ ಮಧ್ಯವನ್ನು ಹೊಂದಲು ಪರವಾನಿಗೆ ಹಾಗೂ ರಹದಾರಿ ಇದೆಯೇ ಎಂದು ಪರೀಲನೆ ಮಾಡಿದ್ದು ಕಂಡುಬಂದಿರುವುದಿಲ್ಲ. ಕಾನೂನಿನ ಅರಿವಿಲ್ಲದೇ ಮಧ್ಯವನ್ನು ಮಾರಾಟ ಮಾಡಿ ಹಣಗಳಿಸುವ ಉದ್ದೇಶದಿಂದ ಮಧ್ಯದ ದಾಸ್ತಾನು ಹೊಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಈ ರೀತಿಯಾಗಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುವುದು ಕರ್ನಾಟಕ

ಅಬಕಾರಿ ಕಾಯ್ದೆ ಕಲಂಗಳ ರೀತ್ಯ ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ಸದರಿ ಮಧ್ಯವನ್ನು ಸ್ಥಳ ಮಹಜರ್ ಕ್ರಮ ಜರುಗಿಸುವ ಮೂಲಕ ಇಲಾಖ ವಶಕ್ಕೆ ಪಡೆದು ದೊರೆತ ಮಧ್ಯದ ಪೈಕಿ ಒರಿಜಿನಲ್ ಚಾಯ್ಸ್ ವಿಸ್ಕಿಯ **30** ಟೆಟ್ರಾ ಪ್ಯಾಕ್ ಗಳನ್ನು ರಸಾಯಿನಿಕ ಪರಿಕ್ಷೇಗೆಂದು ಸ್ಥಳದಲ್ಲೇ ಮಾದರಿಯನ್ನು ತೆಗೆದು ಇಲಾಖ ವಾಹನದಲ್ಲಿ ಇದ್ದ ಬಿಳಿ ಬಟ್ಟೆ ಸೂಜಿ ದಾರ ತಂದು ಇತರೆ ಸಾಮಾಗ್ರಿಗಳನ್ನು ತಂದು ಬಳಿ ಬಟ್ಟೆಯಿಂದ ಒಂದು ಬ್ಯಾಗ್ ಅನ್ನು ತಯಾರಿಸಿಕೊಂಡು ಮಾದರಿ ತೆಗೆದ **30** ಟೆಟ್ರಾ ಪ್ಯಾಕ್ ಗಳನ್ನು ಆ ಬ್ಯಾಗ್ ನಲ್ಲಿ ತುಂಬಿ ದಾರದಿಂದ ಹೊಲೆದು ಕಟ್ಟಿ, ಇಲಾಖ ಸೀಲ್ ನಂ **337** ರಿಂದ ಸೀಲ್ ಮಾಡಲಾಯಿತು. ಮಾದರಿ ಸೀಲ್ ನ ನಕಲನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಳ್ಳಲಾಯಿತು. ಮಾದರಿ ಚೀಟಿಯನ್ನು ಮಾದರಿ ಚೀಲಕ್ಕೆ ಅಂಟಿಸಲಾಯಿತು. ನಂತರ ಮಾದರಿ ತೆಗೆದು ಉಳಿದ ಟೆಟ್ರಾ ಪ್ಯಾಕ್ಗಳನ್ನು ಮುಂದಿನ ತನಿಖೆಗಾಗಿ ವಶಪಡಿಸಿಕೊಳ್ಳಲಾಯಿತು. ನಂತರ ಉಳಿದ ಟೆಟ್ರಾ ಪ್ಯಾಕ್ ಗಳನ್ನು ಮೇಲಾಧಿಕಾರಿಗಳ ಆದೇಶದಂತೆ ನಾಶ ಪಡಿಸುವುದಾಗಿ ಪಂಚರಿಗೆ ತಿಳಿಸಿ, ದೊರೆತ ಪ್ಲಾಸ್ಟಿಕ್ ಚೀಲಕ್ಕೆ ತುಂಬಿ ಕಛೇರಿಗೆ ತರಲಾಯಿತು. ಸದರಿ ಸ್ಥಳ ಮಹಜರ್ ಕ್ರಮವನ್ನು ಮ **1.20** ರಿಂದ **2.30** ವರಿಗೂ ಬರೆಯಲಾಯಿತು. ಸದರಿ ಮಹಜರ್ ಕ್ರಮವನ್ನು ಪಂಚರಾದ ಚಾಸಾ-**2, 3, 5,** ಚಾಸಾ-**1** ಹಾಗೂ ನಾನು ಸಹಿ ಮಾಡಿರುತ್ತೇನೆ. ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೆನೆ. ನಿಪಿ-**1** ರಲ್ಲಿನ ಸಹಿಯನ್ನು ನಿಪಿ-**1**(ಡಿ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**19.** ಆರೋಪಿ ಪರ ವಕೀಲರು ಪ್ರಾಸಾ.**5** ರವರನ್ನು ಪಾಟೀ ಸವಾಲಿಗೊಳಪಡಿಸಿದ್ದು, ಮಾಹಿತಿಯನ್ನು ಚಾಸಾ-**1**ರವರು ನಮಗೆ ಹೇಳಿರುತ್ತಾರೆ. ಆ ದಿನ ಕಛೇರಿಯನ್ನು ಬೆಳಿಗ್ಗೆ **10.00** ಗಂಟೆಗೆ ಬಿಟ್ಟಿರುತ್ತೇವೆ. ಆ ದಿನ ಬಿಎಂ ರಸ್ತೆಯಲ್ಲಿ ಗಸ್ತು ಮಾಡಿರುತ್ತೇವೆ. ದಂಡಿಗನಹಳ್ಳಿಗೆ ಹೋದಾಗ ಮ **1.00**

ಗಂಟೆಯಾಗಿತ್ತು. ದಂಡಿಗನಹಳ್ಳಿ ಗೇಟ್ ನಿಂದ ಗ್ರಾಮಕ್ಕೆ **1.50** ರಿಂದ **2** ಕಿಮಿ ಆಗುತ್ತದೆ. ದಂಡಿಗನಹಳ್ಳಿ ಗೇಟ್ ನಿಂದ ಗ್ರಾಮಕ್ಕೆ ಪಂಚರನ್ನು ಕರೆದುಕೊಂಡು ಹೋಗಿರುತ್ತೇವೆ. ಚಾಸಾ-**2, 3** ರವರು ದಂಡಿಗನಹಳ್ಳಿ ಗ್ರಾಮದವರು. ಸದರಿಯವರ ಸಹಿಯನ್ನು ದಿಃ **20.11.2021** ರಂದು ಹೊರತು ಪಡಿಸಿ ಬೇರೆ ದಿನ ಅವರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ. ಅದೇ ದಿನ ಸದರಿಯವರಿಗೆ ನೋಟಿಸ್ ಜಾರಿಯಾಗಿರುತ್ತದೆ. ಶೋಧನ ಸುಮುಚಿತ್ತ ವಾರೆಂಟ್ ಗೆ ದಿಃ **20.11.2021** ರಂದು ಪಂಚರ ಸಹಿ ಪಡೆದಿರುತ್ತೇವೆ. ನಿಪಿ-**4** ರಲ್ಲಿ ದಿಃ **19.11.2021** ರಂದು ದಿನಾಂಕ ನಮೂದು ಆಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-**4**ಕ್ಕೆ ಚಾಸಾ-**2, 3**ರವರ ಸಹಿಯನ್ನು ದಿಃ **19.11.2021** ರಂದು ಪಡೆದಿರುವುದಾಗಿ ನಮೂದು ಆಗಿದೆ ಎಂದರೆ ಸಾಕ್ಷಿಯು ನೋಡಿ ಹೌದು ಎಂದು ನುಡಿದಿರುತ್ತಾರೆ. ನೋಟಿಸ್ ನಲ್ಲಿ ಚಾಸಾ-**2** ರವರು ದಂಡಿಗನಹಳ್ಳಿ ಎಂದು ನಮೂದು ಆಗಿರುತ್ತದೆ. ಆದಿನ ಮುಮಾ-**1** ಇದ್ದ ಪ್ಲಾಸ್ಟಿಕ್ ಚೀಲವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಈ ದಿನ ನ್ಯಾಯಾಲಯದಲ್ಲಿ ಪ್ಲಾಸ್ಟಿಕ್ ಚೀಲ ಇರುವುದಿಲ್ಲ ಎಂದು ನುಡಿದಿರುತ್ತಾರೆ.

**20.** ಪ್ರಾಸಾ.**6**/ ಚಾಸಾ.**5** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ **20.11.2021** ರಂದು ದಂಡಿಗನಹಳ್ಳಿಯ ಬಳಿ ಹೋಗಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗಳ ಬಳಿ ಹೋಗಿ ನಮ್ಮ ಪರಿಚಯ ಹೇಳಿಕೊಂಡು ಅವರ ಪರಿಚಯವನ್ನು ಕೇಳಿ ನಾವು ಬಂದ ಕಾರಣ ತಿಳಿಸಿದೇವು. ದಂಡಿಗನಹಳ್ಳಿ ಗ್ರಾಮದಲ್ಲಿ ಇರುವ ಆರೋಪಿಯು ತಮ್ಮ ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿರುತ್ತದೆ. ಮಾಹಿತಿಯ ಸಂಬಂಧ ನಾವು ಇಲ್ಲಿಗೆ ಬಂದಿರುವುದಾಗಿ ಆ ಮೂರು ಜನರಿಗೆ ತಿಳಿಸಿ. ಸದರಿ ವ್ಯಕ್ತಿಯ ಮನೆಯನ್ನು ಶೋಧಿಸುವಾಗ ತಾವುಗಳು ಪಂಚರಾಗಿ ಬಂದು ಹಾಜರು ಇದ್ದು ಸಹಕರಿಸಬೇಕು

ಎಂದು ಕೇಳಿಕೊಂಡಾಗ, ಅವರುಗಳು ಒಪ್ಪಿ ಇಲಾಖಾ ವಾಹನದಲ್ಲಿ ನಮ್ಮ ಜೊತೆ ಬಂದಿರುತ್ತಾರೆ. ಅವರಿಗೆ ಪಂಚರ ನೋಟಿಸ್ ನ್ನು ನೀಡಿ ಸಹಿ ಪಡೆದುಕೊಳ್ಳಲಾಯಿತು. ನಂತರ ನ್ಯಾಯಾಲಯದಿಂದ ಶೋಧನ ವಾರೆಂಟ್ ಅನ್ನು ಪಡೆದುಕೊಳ್ಳಲು ಸಮಯವಾಕಾಶ ಇಲ್ಲದ ಕಾರಣ ಹಾಗೂ ತಡಯಾದರೆ ಆರೋಪಿಯು ಸಾಕ್ಷ್ಯವನ್ನು ನಾಶಮಾಡಬಹುದು ಎಂಬ ಕಾರಣಕ್ಕೆ ಕರ್ನಾಟಕ ಅಭಕಾರಿ ಕಾಯ್ದೆ **1965** ಅಡಿಯಲ್ಲಿ ಅಧಿಕಾರವಿದ್ದ ಕಾರಣ ಶೋಧನ ಸಮುಚಿತ ವಾರೆಂಟ್ ನ್ನು ಸ್ಥಳದಲ್ಲಿ ತಯಾರಿಸಿಕೊಂಡು ಪಂಚರ ಸಹಿ ಪಡೆದುಕೊಳ್ಳಲಾಯಿತು. ನಂತರ ಮಾಹಿತಿ ಇದ್ದ ಮನೆಯನ್ನು ತೋರಿಸಿರುತ್ತಾರೆ. ನಂತರ ಮನೆಯ ಬಳಿ ಮಹಿಳೆ ಒಬ್ಬರೂ ನಿಂತಿರುವುದು ಕಂಡುಬಂದಿದ್ದು ನಮ್ಮನ್ನು ನೋಡಿ ಗಾಬರಿಗೂಂಡು ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿದ್ದು ಅವರು ಸಿಕ್ಕಿರುವುದಿಲ್ಲ. ಪಂಚರು ಮಾಹಿತಿ ಇರುವ ವ್ಯಕ್ತಿಯೇ ಓಡಿ ಹೋಗಿದ್ದು ಎಂದು ನಮಗೆ ತಿಳಿಸಿರುತ್ತಾರೆ. ನಂತರ ಸಿಬ್ಬಂದಿ ಪಂಚರ ಸಹಾಯದಿಂದ ಅಂಗ ಶೋಧನೆ ಮಾಡಿಕೊಂಡು, ಶೋಧಿಸಿದಾಗ ಮನೆಯಕೊಠಡಿಯ ಒಂದು ಮೂಲೆಯಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಪತ್ತೆಯಾಗಿದ್ದು ಅದನ್ನು ಮನೆಯ ಮುಂಭಾಗ ತಂದು ಸುರಿದು ನೋಡಿದಾಗ ಅದರಲ್ಲಿ ಭದ್ರತ ಚೀಟಿ ಸಂಖ್ಯೆ ಇಲ್ಲದ ಒರಿಜಿನಲ್ ಹೆಸರಿನ **90**ಮಿ **58** ಟೆಟ್ರಾ ಪ್ಯಾಕ್ ಗಳು ಕಂಡುಬಂದಿರುತ್ತದೆ. ಸದರಿ ಮಧ್ಯವನ್ನು ಹೊಂದಲು ಪರವಾನಿಗೆ ಹಾಗೂ ರಹದಾರಿ ಇದೆಯೇ ಎಂದು ಪರೀಲನೆ ಮಾಡಿದ್ದು ಕಂಡುಬಂದಿರುವುದಿಲ್ಲ. ಕಾನೂನಿನ ಅರಿವಿಲ್ಲದೇ ಮಧ್ಯವನ್ನು ಮಾರಾಟ ಮಾಡಿ ಹಣಗಳಿಸುವ ಉದ್ದೇಶದಿಂದ ಮಧ್ಯದ ದಾಸ್ತಾನು ಹೊಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಈ ರೀತಿಯಾಗಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುವುದು ಕರ್ನಾಟಕ ಅಭಕಾರಿ ಕಾಯ್ದೆ ಕಲಂಗಳ ರೀತ್ಯ ಶಿಕ್ಷರ್ಹ ಅಪರಾಧ ಎಂದು ತಿಳಿಸಿ ಸದರಿ ಮಧ್ಯವನ್ನು ಸ್ಥಳ ಮಹಜರ್ ಕ್ರಮ ಜರುಗಿಸುವ ಮೂಲಕ ಇಲಾಖಾ ವಶಕ್ಕೆ

ಪಡೆದು ದೊರೆತ ಮಧ್ಯದ ಪೈಕಿ ಒರಿಜಿನಲ್ ಚಾಯ್ಸ್ ವಿಸ್ಕಿಯ **30** ಟೆಟ್ರಾ ಪ್ಯಾಕ್ ಗಳನ್ನು ರಸಾಯಿನಿಕ ಪರಿಕ್ಷೆಗೆಂದು ಸ್ಥಳದಲ್ಲೇ ಮಾದರಿಯನ್ನು ತೆಗೆದು ಇಲಾಖ ವಾಹನದಲ್ಲಿ ಇದ್ದ ಬಿಳಿ ಬಟ್ಟೆ ಸೂಜಿ ದಾರ ತಂದು ಇತರೆ ಸಾಮಾಗ್ರಿಗಳನ್ನು ತಂದು ಬಳಿ ಬಟ್ಟೆಯಿಂದ ಒಂದು ಬ್ಯಾಗ್ ಅನ್ನು ತಯಾರಿಸಿಕೊಂಡು ಮಾದರಿ ತೆಗೆದ **30** ಟೆಟ್ರಾ ಪ್ಯಾಕ್ ಗಳನ್ನು ಆ ಬ್ಯಾಗ್ ನಲ್ಲಿ ತುಂಬಿ ದಾರದಿಂದ ಹೊಲೆದು ಕಟ್ಟಿ, ಇಲಾಖ ಸೀಲ್ ನಂ **337** ರಿಂದ ಸೀಲ್ ಮಾಡಲಾಯಿತು. ಮಾದರಿ ಸೀಲ್ ನ ನಕಲನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಳ್ಳಲಾಯಿತು. ಮಾದರಿ ಚೀಟಿಯನ್ನು ಮಾದರಿ ಚೀಲಕ್ಕೆ ಅಂಟಿಸಲಾಯಿತು. ನಂತರ ಮಾದರಿ ತೆಗೆದು ಉಳಿದ ಟೆಟ್ರಾ ಪ್ಯಾಕ್ಗಳನ್ನು ಮುಂದಿನ ತೆಖೆಗಾಗಿ ವಶಪಡಿಸಿಕೂಳ್ಳಲಾಯಿತು. ನಂತರ ಉಳಿದ ಟೆಟ್ರಾ ಪ್ಯಾಕ್ ಗಳನ್ನು ಮೇಲಾಧಿಕಾರಿಗಳ ಆದೇಶದಂತೆ ನಾಶ ಪಡಿಸುವುದಾಗಿ ಪಂಚರಿಗೆ ತಿಳಿಸಿ, ದೊರೆತ ಪ್ಲಾಸ್ಟಿಕ್ ಚೀಲಕ್ಕೆ ತುಂಬಿ ಕಛೇರಿಗೆ ತರಲಾಯಿತು. ಸದರಿ ಸ್ಥಳ ಮಹಜರ್ ಕ್ರಮವನ್ನು ಮ **1.20** ರಿಂದ **2.30** ವರಿಗೂ ಬರೆಯಲಾಯಿತು. ಸದರಿ ಮಹಜರ್ ಕ್ರಮವನ್ನು ಪಂಚರಾದ ಚಾಸಾ-**2, 3, 4,** ಚಾಸಾ-**1** ಹಾಗೂ ನಾನು ಸಹಿ ಮಾಡಿರುತ್ತೇನೆ. ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ನಿಪಿ-**1** ರಲ್ಲಿನ ಸಹಿಯನ್ನು ನಿಪಿ-**1**(ಇ) ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**21.** ಆರೋಪಿ ಪರ ವಕೀಲರು ಪ್ರಾಸಾ.**6** ರವರನ್ನು ಪಾಟೀ ಸವಾಲಿಗೊಳಪಡಿಸಿದ್ದು ಮಾಹಿತಿಯನ್ನು ಚಾಸಾ-**1**ರವರು ನಮಗೆ ಹೇಳಿರುತ್ತಾರೆ. ಆ ದಿನ ಕಛೇರಿಯನ್ನು ಬೆಳಿಗ್ಗೆ **10.00** ಗಂಟೆಗೆ ಬಿಟ್ಟಿರುತ್ತೇವೆ. ಆ ದಿನ ಬಿಎಂ ರಸ್ತೆಯಲ್ಲಿ ಗಸ್ತು ಮಾಡಿರುತ್ತೇವೆ. ದಂಡಿಗನಹಳ್ಳಿಗೆ ಹೋದಾಗ ಮಧ್ಯಾಹ್ನ **1.00** ಗಂಟೆಯಾಗಿತ್ತು. ದಂಡಿಗನಹಳ್ಳಿ ಗೇಟ್ ನಿಂದ ಗ್ರಾಮಕ್ಕೆ **1.50** ರಿಂದ **2** ಕಿಮಿ ಆಗುತ್ತದೆ. ದಂಡಿಗನಹಳ್ಳಿ ಗೇಟ್ ನಿಂದ ಗ್ರಾಮಕ್ಕೆ ಪಂಚರನ್ನು

ಕರೆದುಕೊಂಡು ಹೋಗಿರುತ್ತೇವೆ. ಚಾಸಾ-**2, 3** ರವರು ದಂಡಿಗನಹಳ್ಳಿ ಗ್ರಾಮದವರು. ಸದರಿಯವರ ಸಹಿಯನ್ನು ದಿಃ**20.11.2021** ರಂದು ಹೊರತು ಪಡಿಸಿ ಬೇರೆ ದಿನ ಅವರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ. ಅದೇ ದಿನ ಸದರಿಯವರಿಗೆ ನೋಟಿಸ್ ಜಾರಿಯಾಗಿರುತ್ತದೆ. ಶೋಧನ ಸುಮುಚಿತ್ತ ವಾರೆಂಟ್ ಗೆ ದಿಃ **20.11.2021** ರಂದು ಪಂಚರ ಸಹಿ ಪಡೆದಿರುತ್ತೇವೆ. ನಿಪಿ-**4** ರಲ್ಲಿ ದಿಃ **19.11.2021** ರಂದು ದಿನಾಂಕ ನಮೂದು ಆಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-**4**ಕ್ಕೆ ಚಾಸಾ-**2** ಮತ್ತು **3**ರವರ ಸಹಿಯನ್ನು ದಿಃ **19.11.2021** ರಂದು ಪಡೆದಿರುವುದಾಗಿ ನಮೂದು ಆಗಿದೆ ಎಂದರೆ ಸಾಕ್ಷಿಯು ನೋಡಿ ಹೌದು ಎಂದು ನುಡಿದಿರುತ್ತಾರೆ. ನೋಟಿಸ್ ನಲ್ಲಿ ಚಾಸಾ-**2** ರವರು ದಂಡಿಗನಹಳ್ಳಿ ಎಂದು ನಮೂದು ಆಗಿರುತ್ತದೆ. ತಾನು ಹೇಳಿದಂತೆ ಆ ದಿನ ಆರೋಪಿಯು ತಮ್ಮನ್ನು ನೋಡಿ ಓಡಿ ಹೋದರು ಎಂದು ಹೇಳಿದ್ದು ಆದರೆ ಯಾವ ಬಣ್ಣದ ಬಟ್ಟೆಯನ್ನು ಹಾಕಿದ್ದ ಎಂದು ನೆನಪಿಲ್ಲ. ಆದಿನ ಮುಮಾ-**1** ಇದ್ದ ಪ್ಲಾಸ್ಟಿಕ್ ಚೀಲವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಈ ದಿನ ನ್ಯಾಯಾಲಯದಲ್ಲಿ ಪ್ಲಾಸ್ಟಿಕ್ ಚೀಲ ಇರುವುದಿಲ್ಲ ಎಂದು ನುಡಿದಿರುತ್ತಾರೆ.

**22.** ಒಟ್ಟಾರೆಯಾಗಿ, ಅಭಿಯೋಜನೆಯ ಪ್ರಕರಣವನ್ನು ರುವಾತುಪಡಿಸಲು ಪ್ರಾಸಾ -1 ರಿಂದ 6 ರವರ ಸಾಕ್ಷ್ಯ ಹಾಗೂ ನಿಪಿ **1** ರಿಂದ **11** ಬಹಳ ಬಹುಮುಖ್ಯವಾಗಿದ್ದು, ಪ್ರಾಸಾ **1** ಮತ್ತು **2** ರವರು ನಿಪಿ **1** ರವರ ಪಂಚರಾಗಿದ್ದು, ಸದರಿಯವರು ತಮ್ಮ ಸಹಿಗಳನ್ನು ನೋಡಿ ಗುರುತಿಸಿಕೊಂಡಿದ್ದನ್ನು ಹೊರತುಪಡಿಸಿದರೆ, ಇನ್ನುಳಿದಂತೆ ನಿಪಿ **1** ಮತ್ತು ಮುದ್ದಾ ಮಾಲು **1** ಕ್ಕೆ ತದ್ವಿರುದ್ದವಾಗಿ ಸಾಕ್ಷ್ಯ ನುಡಿದು, ಆರೋಪಿಯನ್ನು ನೋಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

ಆದುದರಿಂದ ಮುದ್ದಾ ಮಾಲು-**1** ನ್ನು ನಿಪಿ **1** ರಂತೆ ಮಹಜರ್ ಜರುಗಿಸಿ ಪ್ರಾಸಾ **1** ಮತ್ತು **2** ರವರ ಸಮಕ್ಷಮ ಪ್ರಾಸಾ **3** ರವರು ಆರೋಪಿಯಿಂದ ಅಮಾನತುಪಡಿಸಿಕೊಂಡಿರುತ್ತಾರೆ ಎಂಬ ಬಗ್ಗೆ ಸಂಶಯಕ್ಕೆ ಎಡೆ ಮಾಡಿ ಕೊಡುತ್ತದೆ.

**23.** ಪ್ರಾಸಾ **3** ರವರು ಅಬಕಾರಿ ಪೋಲೀಸ್ ಅಧಿಕಾರಿಯಾಗಿದ್ದು, ಸದರಿಯವರು ಪ್ರಾಸಾ **5** ಮತ್ತು **6** ರವರೊಂದಿಗೆ ದಾಳಿ ಮಾಡಿ ಮುದ್ದ ಮಾಲು **1** ನ್ನು ಆರೋಪಿಯು ಮನೆಯಿಂದ ಅಮಾನತುಪಡಿಸಿಕೊಂಡು ನಿಪಿ **1** ನ್ನು ಜರುಗಿಸಿ ಸಹಿ ಮಾಡಿದ್ದು ತಮ್ಮೊಂದಿಂಗೆ ಪ್ರಾಸಾ **1, 2 5** ಮತ್ತು **6** ರವರು ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದೇರೀತಿ, ಪ್ರಾಸಾ **3** ರವರ ಸಾಕ್ಷ್ಯಕ್ಕೆ ಪೂರಕವಾಗಿ ಬೇರಾವುದೇ ಸ್ವತಂತ್ರ ಸಾಕ್ಷ್ಯವು ನ್ಯಾಯಾಲಯಿದ ಮುಂದೆ ಲಭ್ಯ ಇರುವುದಿಲ್ಲ. ಅಲ್ಲದೇ, ಆರೋಪಿಯಿಂದ ವಶಪಡಿಸಿಕೊಂಡಿದ್ದೇನೆ ಎಂದು ಹೇಳಲಾದ **58** ಟೆಟ್ರಾ ಪ್ಯಾಕೆಟ್ ಗಳಲ್ಲಿ ಕೇವಲ **30** ಟೆಟ್ರಾ ಪ್ಯಾಕೆಟ್ ಗಳನ್ನು ಮಾತ್ರ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದು, ಉಳಿದ ಮದ್ಯವನ್ನು ಪರೀಕ್ಷೆಗೆ ಕಳುಹಿಸಿರುವುದಿಲ್ಲ. ಆದುದರಿಂದ, ಉಳಿದ ಟೆಟ್ರಾ ಪ್ಯಾಕೆಟ್ ಗಳಲ್ಲಿ ಮಧ್ಯ ಸಾರ ಇತ್ತೋ ಇಲ್ಲವೋ ಎಂಬುವುದರ ಬಗ್ಗೆ ಸಂಶಯ ಉಂಟಾಗುತ್ತದೆ.

**24.** ಅಲ್ಲದೇ, ಪ್ರಾಸಾ **1, 5** ಮತ್ತು **6** ರವರು ಆರೋಪಿಯು ಯಾವ ಬಣ್ಣದ ಬಟ್ಟೆಯನ್ನು ಹಾಕಿದ್ದರು ಎಂದು ಗೊತ್ತಿಲ್ಲ. ಅದೇರೀತಿ ನಿಪಿ-**1** ನ್ನು ದಿನಾಂಕಃ **19.11.2021** ರಂದು ಜರುಗಿಸಿದ್ದು, ಅದಕ್ಕೆ ಪ್ರಾಸಾ **1** ಮತ್ತು **2** ರವರ ಸಹಿ ಪಡೆದಿರುತ್ತಾರೆ. ಆಂದರೆ ದಾಳಿ ಮಾಡಿದ ಒಂದು ದಿನ ಮೊದಲು ನಿಪಿ **4** ನ್ನು ತಯಾರಿಸಿರುವುದು ಕಂಡು ಬರುತ್ತದೆ. ಅದೇ ರೀತಿ ಮುದ್ದಾ ಮಾಲು **1** ನ್ನು ಇಟ್ಟಿದ್ದ ಪ್ಲಾಸ್ಟಿಕ್ ಚೀಲವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ಆದುದರಿಂದ ಪ್ರಾಸಾ **1, 5** ಮತ್ತು **6**

ರವರ ಸಾಕ್ಷ್ಯ ಸಂಶಯದಿಂದ ಕೂಡಿದ್ದು, ಸದರಿಯವರ ಸಾಕ್ಷಕ್ಕೆ ಪೂರಕವಾಗಿ ಬೇರಾವುದೇ ಸ್ವತಂತ್ರ ಸಾಕ್ಷ್ಯವು ನ್ಯಾಯಾಲಯಿದ ಮುಂದೆ ಲಭ್ಯ ಇರುವುದಿಲ್ಲ.

**25.** ಪ್ರಾಸಾ 4 ರವರು ತನಿಖಾಧಿಕಾರಿಯಾಗಿದ್ದು, ಸದರಿಯವರು ತಮ್ಮ ಕರ್ತವ್ಯಕ್ಕನುಗುಣವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈಗಾಗಲೇ ಚರ್ಚಿಸಿರುವಂತೆ, ನ್ಯಾಯಾಲಯದ ಮುಂದೆ ಯಾವುದೇ ಪ್ರತ್ಯಕ್ಷ ಸಾಕ್ಷಿಗಳು ಇರುವುದಿಲ್ಲ. ಅದುದರಿಂದ, ಸದರಿಯವರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯ ವಿರುದ್ಧದ ಆರೋಪಗಳನ್ನು ನಿರ್ಣಯಿಸಲು ಸಾಧ್ಯವಿಲ್ಲ. ಅಲ್ಲದೇ, ಅಭಿಯೋಜನೆಯು ತನ್ನ ನಿಲುವಿನಂತೆ ಆರೋಪಿಯ ವಿರುದ್ಧದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದುದರಿಂದ, ಸಂಶಯದ ಲಾಭವನ್ನು ಆರೋಪಿತಳಿಗೆ ನೀಡುತ್ತಾ ಆರೋಪಿತಳು ನಿರ್ದೋಷಿತಳು ಎಂದು ತೀರ್ಮಾನಕ್ಕೆ ಬಂದು ಅಂಶ ನಂ.1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

**26.** **ಅಂಶ ಸಂಖ್ಯೆ 3 :-** ಅಭಿಯೋಜನೆಯು ಆರೋಪಿತಳ ವಿರುದ್ಧ ಹೊರಿಸಿರುವ ಆರೋಪಣೆಯನ್ನು ನಿಸ್ಸಂದೇಹವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿರುವ ಕಾರಣ, ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

## :: ಆದೇಶ::

ದಂ.ಪ್ರ.ಸಂ. ಕಲಂ 248(1)ರ ಪ್ರಕಾರ ಆರೋಪಿಯು **ಅಬಕಾರಿ ಕಾಯ್ದೆ** ಕಲಂ.14, 15, 32(1) ಮತ್ತು 38(ಎ) ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಯೆಂದು ಘೋಷಿಸಿ ಬಿಡುಗಡೆ ಮಾಡಲಾಗಿರುತ್ತದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

ಎಂ.ಓ.-1 ಬೆಲೆರಹಿತವಾಗಿರುವುದರಿಂದ ಅಪೀಲು ಅವಧಿಯ ನಂತರ ನಾಶಗೊಳಿಸಲು ಆದೇಶಿಸಿದೆ.

(ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಸಹಿ ಮಾಡಿ ದಿನಾಂಕಃ 20 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಘೋಷಿಸಲಾಯಿತು.)

**(ಪುರುಷೋತ್ತಮ ಟಿ.ಪಿ.)**
1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

## : : ಪರಿಚ್ಛೇದ : :

**1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ .**

| | | |
|---|---|---|
| ಪ್ರಾಸಾ.1 | : | ಪುಟ್ಟಸ್ವಾಮಿಗೌಡ |
| ಪ್ರಾಸಾ.2 | : | ಚಾಮರಾಜೇಗೌಡ |
| ಪ್ರಾಸಾ.3 | : | ರೂಪ |
| ಪ್ರಾಸಾ.4 | : | ಅನಿತ |
| ಪ್ರಾಸಾ.5 | : | ಅಭಿಲಾಷ |
| ಪ್ರಾಸಾ.6 | : | ವೀರಭದ್ರ |

**2. ಅಭಿಯೋಜನೆಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

| | | |
|---|---|---|
| ನಿಪಿ. 1 | : | ಮಹಜರ್ |
| ನಿಪಿ.1(ಎ-ಡಿ) | : | ಸಹಿ |
| ನಿಪಿ. 2&3 | : | ಹೇಳಿಕೆಗಳು |
| ನಿಪಿ.4 | : | ಶೋಧನ ಸಮುಚಿತ ಆಧಾರ |
| ನಿಪಿ.4(ಎ) | : | ಸಹಿ |
| ನಿಪಿ.5 | : | ಸ್ವತ್ತುಗಳ ಪಟ್ಟಿ |
| ನಿಪಿ.5(ಎ) | : | ಸಹಿ |
| ನಿಪಿ.6 | : | ಪ್ರಥಮ ವರ್ತ ಮಾನ ವರದಿ |
| ನಿಪಿ.6(ಎ) | : | ಸಹಿ |
| ನಿಪಿ.7 | : | ಮಾದರಿ ಸೀಲಿನ ನಕಲು |

| | | |
|---|---|---|
| ನಿಪಿ.7(ಎ) | : | ಸಹಿ |
| ನಿಪಿ.8 | : | ನಿವೇದನೆ |
| ನಿಪಿ.8(ಎ-ಬಿ) | : | ಸಹಿ |
| ನಿಪಿ.9 | : | ನೋಟಿಸ್ |
| ನಿಪಿ.9(ಎ) | : | ಸಹಿ |
| ನಿಪಿ.10 | : | ವರದಿ |
| ನಿಪಿ.10(ಎ) | : | ಸಹಿ |
| ನಿಪಿ.11 | : | ರಾಸಾಯನಿಕ ವಿಶ್ಲೇಷಣಾ ವರದಿ |

**3. ಮುದ್ದೆ ಮಾಲುಗಳ ಪಟ್ಟಿಃ**

| | | |
|---|---|---|
| ಎಂ.ಒ.1 | : | ಟೆಟ್ರಾ ಪ್ಯಾಕೆಟ್ಸ್ ಗಳು |

**4. ಆರೋಪಿ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ -**

ಇಲ್ಲ

**5. ಆರೋಪಿ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ -**

ಇಲ್ಲ

**(ಪುರುಷೋತ್ತಮ ಟಿ.ಪಿ.)**
1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.